# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಬಾಗಲಕೋಟೆ ಜಿಲ್ಲೆ ಹುನಗುಂದ ತಾಲ್ಲೂಕಿನ ಇಸ್ಲಾಂಪೂರ ಮತ್ತು ಇತರೆ 60 ಗ್ರಾಮಗಳಲ್ಲಿ ಬಹುಗ್ರಾಮ ಕುಡಿಯುವ ನೀರಿನ ಯೋಜನೆಯ ಅನುಷ್ಠಾನದಲ್ಲಿನ ಕಳಪೆ ಕಾಮಗಾರಿಗೆ ಸಂಬಂಧಿಸಿದಂತೆ ಇಲಾಖಾ ವಿಚಾರಣೆ- ದಂಡನೆ ವಿಧಿಸುವ ಬಗ್ಗೆ.

**ಓದಲಾಗಿದೆ:**

1. ಅಧೀಕ್ಷಕ ಇಂಜಿನಿಯರ್, ಗ್ರಾ.ಕು.ನೀ.& ನೈ.ವೃತ್ತ, ಬೆಳಗಾವಿ ಇವರ ಪತ್ರ ಸಂಖ್ಯೆ: ಅ.ಅ./ಗ್ರಾಕುನೀ&ನೈ/ವೃಬೆ/ಸಿ-1/ ಅನುಬಂಧ-1 ರಿಂದ 4/2017-18/ನಂ.1551, ದಿನಾಂಕ: 18.09.2017.
2. ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 58 ಜಿಪಅ 2016 ದಿನಾಂಕ: 09.07.2019.
3. ವಿಚಾರಣಾ ವರದಿ ದಿನಾಂಕ: 19.02.2020.
4. 2ನೇ ಕಾರಣ ಕೇಳುವ ನೋಟೀಸ್ ಸಂಖ್ಯೆ: ಗ್ರಾಅಪ 58 ಜಿಪಅ 2016 ದಿನಾಂಕ: 05.08.2020.
5. ಶ್ರೀ ಎಸ್.ಎನ್.ಗೌಡರ್, ಅಂದಿನ ಸ.ಕಾ.ಇಂ. ಶ್ರೀ ಮಹಾಂತಪ್ಪ ಕನ್ನೂರ ಅಂದಿನ ಸ.ಕಾ.ಇಂ. ಶ್ರೀ ಸಿ.ಎಸ್.ಪೊಲೀಸ್ ಪಾಟೀಲ್ ಮತ್ತು ಶ್ರೀ ಎಸ್. ಎಂ.ರೇವಡಿ, ಹಾಗೂ ಶ್ರೀ ವಿಜಯಕುಮಾರ ಗೌಡರ್ ಅ ಇವರ ಲಿಖಿತ ಹೇಳಿಕೆ ದಿನಾಂಕ:28.08.2020.
6. ಸರ್ಕಾರದ ಪತ್ರ ದಿನಾಂಕ: 11.11.2020.
7. ಅಧೀಕ್ಷಕ ಇಂಜಿನಿಯರ್, ಗ್ರಾ.ಕು.ನೀ.& ನೈ.ವೃತ್ತ ಬೆಳಗಾವಿ ಮತ್ತು ಕಾರ್ಯಪಾಲಕ ಇಂಜಿನಿಯರ್, ಗ್ರಾ.ಕು.ನೀ.& ನೈ.ವಿಭಾಗ, ಬಾಗಲಕೋಟೆ ಇವರ ಪರಿಶೀಲನಾ ವರದಿ ದಿನಾಂಕ: 06.09.2021

**ಪ್ರಸ್ತಾವನೆ:**

ಅಧೀಕ್ಷಕ ಇಂಜಿನಿಯರ್, ಗ್ರಾ.ಕು.ನೀ. & ನೈ. ವೃತ್ತ, ಬೆಳಗಾವಿ ಇವರು ಮೇಲೆ ಕ್ರಮಸಂಖ್ಯೆ: 1 ರಲ್ಲಿ ಓದಲಾದ ದಿನಾಂಕ: 18.09.2017 ರ ಪತ್ರದ ಜೊತೆ ಭಾರತದ ಲೆಕ್ಕ ನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ ಸ್ಥಳೀಯ ಸಂಸ್ಥೆಗಳ ವರದಿ ಮಾರ್ಚ್ 2012 ಕ್ಕೆ ಕೊನೆಗೊಂಡ ವರ್ಷದಲ್ಲಿ ಆಕ್ಷೇಪಣೆ ದಾಖಲಾದ ಕರ್ನಾಟಕ ವಿಧಾನ ಮಂಡಲದ ಸ್ಥಳೀಯ ಸಂಸ್ಥೆಗಳ ಮತ್ತು ಪಂಚಾಯತ್ ರಾಜ್ ಸಂಸ್ಥೆಗಳ ಸಮಿತಿ 14 ನೇ ವಿಧಾನ ಸಭೆಯ ಕಾರ್ಯಸೂಚಿ ದಿನಾಂಕ: 31.12.2014 ರಲ್ಲಿ ಜರುಗಿದ ಸಭೆಯ ಸೂಚಿಯನ್ವಯ ಕಂಡಿಕೆ-2.1.12.3 ಪ್ರಕಾರ ಬಾಗಲಕೋಟೆ ಜಿಲ್ಲೆ ಹುನಗುಂದ ತಾಲ್ಲೂಕಿನ ಇಸ್ಲಾಂಪುರ ಮತ್ತಿತರೆ 60 ಗ್ರಾಮಗಳಲ್ಲಿ ಬಹುಗ್ರಾಮ ಕುಡಿಯುವ ನೀರಿನ ಯೋಜನೆಯಡಿಯ ಕಾಮಗಾರಿಯಲ್ಲಿ ಎಲ್ಲಾ ಗ್ರಾಮಗಳಿಗೆ ನೀರನ್ನು ಸರಬರಾಜು ಮಾಡಿರುವುದಿಲ್ಲವೆಂದು, ಅನುಷ್ಠಾನಗೊಳಿಸಿರುವ ಕಾಮಗಾರಿಗೆ ಕಳಪೆ ಗುಣಮಟ್ಟದ ಸಾಮಗ್ರಿಗಲನ್ನು ಬಳಸಲಾಗಿದೆ ಎಂದೂ, ಒಟ್ಟಾರೆ ಯೋಜನೆಗೆ ಮಾಡಿರುವ ಆರ್ಥಿಕ ವೆಚ್ಚ ನಷ್ಟವಾಗಲು ಕಾರಣರಾಗಿರುತ್ತಾರೆಂಬ ಆರೋಪಗಳಿಗೆ ಸಂಬಂಧಿಸಿದಂತೆ ಈ ಕೆಳಕಂಡ ಅಧಿಕಾರಿ/ನೌಕರರ ವಿರುದ್ಧ ಶಿಸ್ತು ಕ್ರಮ ಜರುಗಿಸಲು ಸಲ್ಲಿಸಿದ್ದ ಪ್ರಸ್ತಾವನೆಯನ್ನು ಸರ್ಕಾರವು ಪರಿಶೀಲಿಸಿ ಸದರಿಯವರುಗಳ ವಿರುದ್ಧ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು 1957ರ ನಿಯಮ 11ರಂತೆ ಇಲಾಖಾ ವಿಚಾರಣೆ ನಡೆಸಲು ತೀರ್ಮಾನಿಸಿ ಸದರಿಯವರುಗಳಿಗೆ ದಿ:04.06.2018ರಂದು ಕಾರಣ ಕೇಳುವ ನೋಟೀಸನ್ನು ಜಾರಿ ಮಾಡಿ ಸಮಜಾಯಿಷಿ ಪಡೆದು ಸದರಿಯವರುಗಳು ಸಲ್ಲಿಸಿದ ಲಿಖಿತ ಹೇಳಿಕೆಗಳಲ್ಲಿ ಪರಿಗಣನಾರ್ಹವಾದ ಅಂಶಗಳು ಕಂಡುಬಾರದ ಕಾರಣ ಮೇಲೆ ಓದಲಾದ ಕ್ರಮಸಂಖ್ಯೆ:(2)ರ ದಿನಾಂಕ: 09.07.2019ರ ಸರ್ಕಾರದ ಆದೇಶದಲ್ಲಿ ವಿವರವಾದ ಜಂಟಿ ಇಲಾಖಾ ವಿಚಾರಣೆ ನಡೆಸಲು ವಿಚಾರಣಾಧಿಕಾರಿಯವರನ್ನು ನೇಮಿಸಲಾಗಿತ್ತು.

1. ಶ್ರೀ ಮಹಾಂತಪ್ಪ ಕನ್ನೂರ ಅಂದಿನ ಸಹಾಯಕ ಕಾರ್ಯಪಾಲಕ ಇಂಜಿನಿಯರ್

2. ಶ್ರೀ ಎಸ್.ಎನ್.ಗೌಡರ್, ಅಂದಿನ ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಶ್ರೀ ಸಿ.ಎಸ್.ಪೊಲೀಸ್ ಪಾಟೀಲ್, ಅಂದಿನ ಸಹಾಯಕ ಇಂಜಿನಿಯರ್
3. ಶ್ರೀ ವಿಜಯಕುಮಾರ ಗೌಡರ್, ಅಂದಿನ ಕಿರಿಯ ಇಂಜಿನಿಯರ್.
4. ಶ್ರೀ ಎಸ್.ಎಸ್.ರೇವಡಿ, ಅಂದಿನ ಸಹಾಯಕ ಇಂಜಿನಿಯರ್.

ವಿಚಾರಣಾಧಿಕಾರಿ ರವರು ವಿವರವಾದ ವಿಚಾರಣೆಯನ್ನು ನಡೆಸಿ ಮೇಲೆ ಓದಲಾದ ಕ್ರಮಸಂಖ್ಯೆ:(3)ರ ದಿನಾಂಕ: 19.02.2020 ರಂದು ನೀಡಿದ ವಿಚಾರಣಾ ವರದಿಯಲ್ಲಿ ಸದರಿಯವರುಗಳ ವಿರುದ್ಧದ ಆರೋಪವು ಸಾಬೀತಾಗಿರುವುದಾಗಿ ವರದಿ ನೀಡಿರುತ್ತಾರೆ. ಸದರಿ ವರದಿಯನ್ನನುಸರಿಸಿ ಮೇಲೆ ಓದಲಾದ ಕ್ರಮಸಂಖ್ಯೆ: (4) ರ ದಿನಾಂಕ: 05.08.2020ರಲ್ಲಿ ಆರೋಪಿತ ಅಧಿಕಾರಿ/ನೌಕರರುಗಳಿಗೆ ವಿಚಾರಣಾ ವರದಿಯೊಂದಿಗೆ 2ನೇ ಕಾರಣ ಕೇಳುವ ನೋಟೀಸನ್ನು ಜಾರಿ ಮಾಡಲಾಗಿತ್ತು.

ಸರ್ಕಾರದ 2ನೇ ಕಾರಣ ಕೇಳುವ ನೋಟೀಸಿಗೆ ಆರೋಪಿತ ಅಧಿಕಾರಿ/ನೌಕರರು ಮೇಲೆ ಓದಲಾದ (5) ರಲ್ಲಿ ತಮ್ಮ ಲಿಖಿತ ಪ್ರತಿರಕ್ಷಣಾ ಹೇಳಿಕೆಗಳನ್ನು ಸಲ್ಲಿಸಿರುತ್ತಾರೆ.

ಆರೋಪಿತರುಗಳ ವಿರುದ್ಧದ ಆರೋಪವೆಂದರೆ, ಆಪಾದಿತರು ಮಂಜೂರಾದ ಅಂದಾಜಿನ ಪ್ರಕಾರ 60 ವಸತಿ ಪ್ರದೇಶಗಳಿಗೆ ನೀರು ಪೂರೈಸಬೇಕಾಗಿದ್ದು, ಆದರೆ ಸದರಿ ಯೋಜನೆಯಿಂದ ಕೇವಲ 27 ವಸತಿ ಪ್ರದೇಶಗಳು ಸಮರ್ಪಕವಾಗಿ ನೀರನ್ನು ಪಡೆದಿದ್ದು, 23 ವಸತಿ ಪ್ರದೇಶಗಳು ಆಗಾಗ್ಗೆ ನೀರನ್ನು ಪಡೆಯುತ್ತಿವೆ, 6 ವಸತಿ ಪ್ರದೇಶಗಳು ನೀರನ್ನು ಪಡೆದಿಲ್ಲ ಹಾಗೂ 4 ವಸತಿ ಪ್ರದೇಶಗಳನ್ನು ಯೋಜನೆಯಿಂದ ಸಂಪೂರ್ಣವಾಗಿ ಕೈಬಿಡಲಾಗಿರುತ್ತದೆ. ಅಲ್ಲದೆ ಕಾಮಗಾರಿಗೆ ಉಪಯೋಗಿಸಿರುವ ಗಾಳಿ, ನೀರು ನಿಯಂತ್ರಣ ಕಪಾಟು ಕಳಪೆ ಗುಣಮಟ್ಟದಿಂದ ಕೂಡಿರುವುದು, ಕೊಳವೆ ಮಾರ್ಗ ಮತ್ತು ವಾಲ್ವ್ ಚೇಂಬರ್ ಗಳಲ್ಲಿ ಅಧಿಕ ಪ್ರಮಾಣದ ನೀರು ಸೋರಿಕೆ, ಇತ್ಯಾದಿ ನ್ಯೂನ್ಯತೆಗಳಿಂದಾಗಿ ಯೋಜನೆಗೆ ವೆಚ್ಚ ಮಾಡಿರುವ ರೂ. 19.81 ಕೋಟಿ ವ್ಯರ್ಥವಾಗಿರುವುದಾಗಿ , ಟೆಂಡರ್ ಷರತ್ತುಗಳ ಪ್ರಕಾರ ರೂ. 1.35 ಕೋಟಿ ದಂಡವನ್ನು ಹಾಕಿದ್ದರೂ ಕೇವಲ 1.00 ಲಕ್ಷ ವಸೂಲಿ ಮಾಡಿರುವುದು ಇತ್ಯಾದಿ ಆರೋಪಗಳನ್ನು ಮಾಡಲಾಗಿರುತ್ತದೆ.

ಆಪಾದಿತರುಗಳು ತಮ್ಮ ಲಿಖಿತ ಹೇಳಿಕೆಯಲ್ಲಿ ವಿಚಾರಣಾಧಿಕಾರಿಗಳು ತಾವು ಸಲ್ಲಿಸಿರುವ ಆಕ್ಷೇಪಣಾ ಹೇಳಿಕೆಗಳನ್ನು ಹಾಗೂ ಸಾಕ್ಷಿಗಳ ಹೇಳಿಕೆಗಳನ್ನು ಪರಿಗಣಿಸಿರುವುದಿಲ್ಲವೆಂದೂ, 60 ಗ್ರಾಮಗಳ ಪೈಕಿ 56 ಗ್ರಾಮಗಳಿಗೆ ಕುಡಿಯುವ ನೀರನ್ನು ಸಮರ್ಪಕವಾಗಿ ಒದಗಿಸಲಾಗುತ್ತಿದ್ದು, 4 ಗ್ರಾಮಗಳು ಮುಳುಗಡೆಯಾಗಿರುತ್ತದೆಂದು ತಿಳಿಸಿರುತ್ತಾರೆ. ತಾವು ರೈತರ ಮನವೊಲಿಸಿ ಅವಶ್ಯವಿರುವ ಜಮೀನನ್ನು ದಾನಪತ್ರದ ಮೂಲಕ ಪಡೆದುಕೊಂಡು ಕಡಿಮೆ ಅವಧಿಯಲ್ಲಿ ಕಾಮಗಾರಿಯನ್ನು ನಿರ್ವಹಿಸುವುದರ ಜೊತೆಗೆ ಮಂಜೂರಾದ ರೂ.20.60 ಕೋಟಿ ರೂ.ಗಳ ಪೈಕಿ 20.48 ಕೋಟಿ ರೂ.ಗಳು ಖರ್ಚಾಗಿದ್ದು, ಇನ್ನೂ 12.24 ಲಕ್ಷ ರೂ.ಗಳು ಸರ್ಕಾರಕ್ಕೆ ಉಳಿತಾಯವಾಗಿರುತ್ತದೆ. ಹೆಚ್ಚುವರಿ ವೆಚ್ಚವಾಗಿರುವುದಿಲ್ಲ. ಅಲ್ಲದೆ ಕಾಮಗಾರಿಗೆ ಮಂಜೂರಾದ ಅಂದಾಜಿನ ಅನುಸಾರ 200 ಮಿ.ಮೀ.ವ್ಯಾಸದ ಪೈಪುಗಳನ್ನೇ ಬಳಸಲಾಗಿರುತ್ತದೆಂದೂ ತಿಳಿಸಿರುತ್ತಾರೆ.

ಕಾಮಗಾರಿಯ ಗುಣಮಟ್ಟಕ್ಕೆ ಸಂಬಂಧಿಸಿದಂತೆ 3rd Party Inspection by GQIC Bijapur ಇವರಿಂದ ಪರಿಶೀಲನೆ ಮಾಡಲಾಗಿದುದ, ಉತ್ತಮ ಗುಣಮಟ್ಟ ಹೊಂದಿರುವ ಬಗ್ಗೆ ವರದಿಯನ್ನು ನೀಡಿರುತ್ತಾರೆಂದು, ಮೇಲಾಧಿಕಾರಿಯಾದ ಕಾರ್ಯಪಾಲಕ ಇಂಜಿನಿಯರ್, ಅಧೀಕ್ಷಕ ಇಂಜಿನಿಯರ್ ಹಾಗೂ ಮುಖ್ಯ ಇಂಜಿನಿಯರ್ ರವರು ಮೇಲಿಂದ ಮೇಲೆ ಕಾಮಗಾರಿಯ ಸ್ಥಳ ಪರಿಶೀಲನೆ ಮಾಡಿದ್ದು, ಗುತ್ತಿಗೆದಾರರು ಕಾಮಗಾರಿಯನ್ನು ನಿಗಧಿತ ಅವಧಿಯಲ್ಲಿ ಪೂರ್ಣಗೊಳಿಸದ ಕಾರಣ ಟೆಂಡರ್ ಗುತ್ತಿಗೆಯನ್ನು ರದ್ದು ಮಾಡಿ ಗುತ್ತಿಗೆದಾರರನ್ನು ಕಪ್ಪುಪಟ್ಟಿಗೆ ಸೇರಿಸಿ ಅವರಿಂದ EMD/FSD/Pedning Bill ಗಳಿಂದ ಮೊತ್ತವನ್ನು ಮುಟ್ಟುಗೋಲು ಹಾಕಲು ಮುಖ್ಯ ಇಂಜಿನಿಯರ್ ರವರು ಆದೇಶಿಸಿರುತ್ತಾರೆ.

ಮುಖ್ಯ ಇಂಜಿನಿಯರ್ ರವರ ಆದೇಶದ ಅನುಸಾರ ಗುತ್ತಿಗೆದಾರರಿಂದ ಟೆಂಡರ್ ಷರತ್ತುಗಳ ಪ್ರಕಾರ ದಂಡವನ್ನು ವಸೂಲು ಮಾಡುವ ಅಧಿಕಾರವು ಕಾರ್ಯಪಾಲಕ ಅಭಿಯಂತರರಿಗೆ ಇದ್ದು, ಕಾರ್ಯಪಾಲಕ ಅಭಿಯಂತರರ ಆದೇಶದ ಅನುಸಾರ ದಂಡ ವಸೂಲು ಮಾಡಲಾಗಿದೆ ಎಂದು ಸದರಿ ಆರೋಪಕ್ಕೆ ತಾವುಗಳು ಜವಾಬ್ದಾರರಲ್ಲವೆಂದು ತಿಳಿಸಿರುತ್ತಾರೆ.

ಮಹಾಲೇಖಪಾಲರ ವರದಿಯ ಅನುಸಾರ 60 ಗ್ರಾಮಗಳಿಗೆ ಕುಡಿಯುವ ನೀರು ಒದಗಿಸುವ ಕಾಮಗಾರಿಯಲ್ಲಿ 27 ಗ್ರಾಮಗಳಿಗೆ ಸಮರ್ಪಕ ನೀರು ಸರಬರಾಜಾಗುತ್ತಿರುವುದು ಕಂಡುಬರುತ್ತದೆ.

ಹಾಗಾಗಿ ಕಾಮಗಾರಿಗೆ ಮಾಡಿರುವ ಸಂಪೂರ್ಣ ವೆಚ್ಚ ನಿರರ್ಥಕವೆಂದು ಪರಿಗಣಿಸುವುದು ಸಮಂಜಸವಾಗುವುದಿಲ್ಲ. ಆಪಾದಿತರುಗಳು ಸಲ್ಲಿಸಿರುವ ಲಿಖಿತ ಹೇಳಿಕೆಯ ಅನುಸಾರ 53/56 ಗ್ರಾಮಗಳಿಗೆ ಕುಡಿಯುವ ನೀರು ಸರಬರಾಜಾಗುತ್ತಿದೆ ಎಂದೂ 04 ಗ್ರಾಮಗಳು ಮುಳುಗಡೆ ವ್ಯಾಪ್ತಿಯಲ್ಲಿವೆ ಎಂದು ತಿಳಿಸಿರುತಾರೆ.

ವಿಚಾರಣಾಧಿಕಾರಿಗಳು ಇಲಾಖಾ ವಿಚಾರಣೆಯಲ್ಲಿ ಆರೋಪಿತರುಗಳ ವಿರುದ್ಧದ ಆರೋಪಗಳು ಸಾಬೀತಾಗಿರುವುದಾಗಿ ತಿಳಿಸಿರುತ್ತಾರೆ. ಆದರೆ ಕಾಮಗಾರಿಯನ್ನು ತಾಂತ್ರಿಕವಾಗಿ ತಪಾಸಣೆ ನಡೆಸಿರುವ ಬಗ್ಗೆ ಯಾವುದೇ ದಾಖಲೆಗಳನ್ನು ಇಲಾಖಾ ವಿಚಾರಣೆಯಲ್ಲಿ ಪರಿಗಣಿಸಲಾಗಿಲ್ಲ. ಆದುದರಿಂದ ಕಾಮಗಾರಿಗೆ 160 ಮಿ.ಮೀ. ವ್ಯಾಸದ ಪೈಪುಗಳನ್ನು ಬಳಸಲಾಗಿದೆಯೇ ಅಥವಾ 200 ಮಿ.ಮೀ. ವ್ಯಾಸದ ಪೈಪುಗಳನ್ನು ಬಳಸಲಾಗಿದೆಯೇ? ಒಂದು ವೇಳೆ 160 ಮಿ.ಮೀ. ವ್ಯಾಸದ ಪೈಪುಗಳನ್ನು ಬಳಸಿದ್ದಲ್ಲಿ, ಇದರಿಂದ ಸರ್ಕಾರಕ್ಕೆ ಉಂಟಾಗಿರುವ ಆರ್ಥಿಕ ನಷ್ಟವೆಷ್ಟು? ಮಂಜೂರಾದ ಅಂದಾಜಿನ ಅನುಸಾರ ಎಷ್ಟು ಗ್ರಾಮಗಳಿಗೆ ಸಮರ್ಪಕ ಕುಡಿಯುವ ನೀರನ್ನು ನೀಡಲಾಗುತ್ತಿದೆ ಹಾಗೂ ಎಷ್ಟು ಗ್ರಾಮಗಳು ನೀರು ಸರಬರಾಜು ಪಡೆಯುತ್ತಿಲ್ಲ.ಕಾಮಗಾರಿ ಅನುಷ್ಠಾನದಲ್ಲಿ ಕಂಡುಬಂದಿರುವ ಇತರೆ ಲೋಪಗಳಿಂದ ಉಂಟಾಗಿರುವ ಆರ್ಥಿಕ ನಷ್ಟದ ಕುರಿತು ಕಾಮಗಾರಿಯ ತಪಾಸಣೆ ನಡೆಸಿ ವರದಿ ನೀಡಲು ಅಧೀಕ್ಷಕ ಇಂಜಿನಿಯರ್, ಗ್ರಾ.ಕು.ನೀ.& ನೈ.ವೃತ್ತ, ಬೆಳಗಾವಿ ಮತ್ತು ಕಾ.ಇಂ. ಗ್ರಾ.ಕು.ನೀ.& ನೈ.ವಿಭಾಗ, ಬಾಗಲಕೋಟೆ ಇವರುಗಳ ಒಂದು ತಂಡ ರಚಿಸಿ ತಪಾಸಣಾ ವರದಿ ಸಲ್ಲಿಸಲು ಮೇಲೆ ಓದಲಾದ ಕ್ರಮಸಂಖ್ಯೆ: (6 ) ರ ಪತ್ರದಲ್ಲಿ ತಿಳಿಸಲಾಗಿತ್ತು.

ಸರ್ಕಾರದ ನಿರ್ದೇಶದನುಸಾರ ಅಧೀಕ್ಷಕ ಇಂಜಿನಿಯರ್, ಗ್ರಾ.ಕು.ನೀ.& ನೈ.ವೃತ್ತ, ಬೆಳಗಾವಿ ಮತ್ತು ಕಾ.ಇಂ. ಗ್ರಾ.ಕು.ನೀ.& ನೈ.ವಿಭಾಗ, ಬಾಗಲಕೋಟೆ ಇವರುಗಳು ಮೇಲೆ ಓದಲಾದ ಕ್ರಮಸಂಖ್ಯೆ:(7 ) ರ ವರದಿಯಲ್ಲಿ ಕೆಲವು ಸ್ಥಳಗಳಲ್ಲಿ 200 ಮಿ.ಮೀ. ವ್ಯಾಸದ ಪೈಪುಗಳನ್ನು ಹಾಗೂ ಕೆಲವು ಸ್ಥಳಗಳಲ್ಲಿ 160 ಮಿ.ಮೀ. ವ್ಯಾಸದ ಪೈಪುಗಳನ್ನು ಅಳವಡಿಸಿರುವುದು ಕಂಡುಬಂದಿರುತ್ತದೆಂದು ವರದಿ ನೀಡಿರುತ್ತಾರೆ. ಹಾಗೂ 56 ಗ್ರಾಮಗಳಿಗೆ ಭೇಟಿ ನೀಡಿ ಪ್ರತಿ ದಿನ ಕುಡಿಯುವ ನೀರನ್ನು ಪೂರೈಸಲಾಗುತ್ತಿದೆ ಎಂಬ ಅಂಶವನ್ನು ಪಂಚಾಯತ್ ಅಭಿವೃದ್ಧಿ ಅಧಿಕಾರಿಯವರಿಂದ ಖಚಿತಪಡಿಸಿಕೊಂಡಿರುತ್ತಾರೆ.

ಮುಖ್ಯ ಇಂಜಿನಿಯರ್ ರವರು ಮೇಲಿಂದ ಮೇಲೆ ಕಾಮಗಾರಿಯ ಸ್ಥಳ ಪರಿಶೀಲನೆ ಮಾಡಿದ್ದು, ಗುತ್ತಿಗೆದಾರರು ಕಾಮಗಾರಿಯನ್ನು ನಿಗಧಿತ ಅವಧಿಯಲ್ಲಿ ಪೂರ್ಣಗೊಳಿಸದ ಕಾರಣ ಟೆಂಡರ್ ಗುತ್ತಿಗೆಯನ್ನು ರದ್ದು ಮಾಡಿ ಗುತ್ತಿಗೆದಾರರನ್ನು ಕಪ್ಪುಪಟ್ಟಿಗೆ ಸೇರಿಸಿ ಅವರಿಂದ EMD/FSD/Pending Bill ಗಳಿಂದ ಮೊತ್ತವನ್ನು ಮುಟ್ಟುಗೋಲು ಹಾಕಲು ಮುಖ್ಯ ಇಂಜಿನಿಯರ್ ರವರು ಆದೇಶಿಸಿದ್ದು, ಅದರಂತೆ ಗುತ್ತಿಗೆದಾರರಿಂದ ಟೆಂಡರ್ ಷರತ್ತುಗಳ ಪ್ರಕಾರ ದಂಡವನ್ನು ವಸೂಲು ಮಾಡುವ ಅಧಿಕಾರವು ಕಾರ್ಯಪಾಲಕ ಅಭಿಯಂತರರಿಗೆ ಇರುತ್ತದೆ. ಅದರಂತೆ ಕಾರ್ಯಪಾಲಕ ಅಭಿಯಂತರರ ಆದೇಶದ ಅನುಸಾರ ದಂಡ ವಸೂಲು ಮಾಡಲಾಗಿದೆ ಎಂದು ಸದರಿ ಆರೋಪಕ್ಕೆ ತಾವುಗಳು ಜವಾಬ್ದಾರರಲ್ಲವೆಂದು ಆರೋಪಿತರುಗಳು ತಮ್ಮ ಲಿಖಿತ ಹೇಳಿಕೆಯಲ್ಲಿ ತಿಳಿಸಿರುವುದು ಪರಿಗಣನೆಗೆ ಅರ್ಹವಾಗಿರುತ್ತದೆ.

ಮೇಲ್ಕಂಡ ಹಿನ್ನಲೆಯಲ್ಲಿ ಆಪಾದಿತರುಗಳು ಮಂಜೂರಾದ ಅಂದಾಜಿನ ಪ್ರಕಾರ ನಿರ್ದಿಷ್ಟ ಪ್ರಮಾಣದ ಪೈಪುಗಳನ್ನು ಅಳವಡಿಸದೇ ಕಡಿಮೆ ವ್ಯಾಸದ ಪೈಪುಗಳನ್ನು ಅಳವಡಿಸಿ ಸರ್ಕಾರಿ ನೌಕರರಿಗೆ ತರವಲ್ಲದ ರೀತಿಯಲ್ಲಿ ವರ್ತಿಸಿ ಗಂಭೀರ ಸ್ವರೂಪದ ಕರ್ತವ್ಯಲೋಪವೆಸಗಿರುವುದು ಸ್ಪಷ್ಟವಾಗುತ್ತದೆ. ಆದುದರಿಂದ ಸದರಿಯವರುಗಳು ಈ ಅಂಶಕ್ಕೆ ಸಂಬಂಧಿಸಿದಂತೆ ಸಲ್ಲಿಸಿರುವ ಲಿಖಿತ ಹೇಳಿಕೆಗಳಲ್ಲಿ ಪರಿಗಣನಾರ್ಹವಾದ ಅಂಶಗಳು ಇರುವುದಿಲ್ಲ. ಆದುದರಿಂದ ಅವರುಗಳು ಎಸಗಿರುವ ಕರ್ತವ್ಯಲೋಪದ ಗಂಭೀರತೆಯನ್ನು ಪರಿಗಣಿಸಿ ದಂಡನೆಯನ್ನು ವಿಧಿಸಲು ಸರ್ಕಾರವು ತೀರ್ಮಾನಿಸಿದೆ. ಆದ್ದರಿಂದ ಈ ಕೆಳಕಂಡ ಆದೇಶ.

**<u>ಸರ್ಕಾರದ ಆದೇಶ ಸಂಖ್ಯೆ: : ಗ್ರಾಅಪ 58 ಜಿಪಲ 2016</u>**
**<u>ಬೆಂಗಳೂರು ದಿನಾಂಕ: 13.01.2022</u>**

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನಲೆಯಲ್ಲಿ ಸರ್ಕಾರವು (1) ಶ್ರೀ ಮಹಾಂತಪ್ಪ ಕನ್ನೂರ ಅಂದಿನ ಸ.ಕಾ.ಇಂ. (2) ಶ್ರೀ ಎಸ್.ಎನ್.ಗೌಡರ್, ಅಂದಿನ ಸ.ಕಾ.ಇಂ. (3) ಶ್ರೀ ಸಿ.ಎಸ್.ಪೊಲೀಸ್ ಪಾಟೀಲ್, ಅಂದಿನ ಸ.ಇಂ.(4) ಶ್ರೀ ವಿಜಯಕುಮಾರ ಗೌಡರ್, ಅಂದಿನ ಕಿ.ಇಂ. ಮತ್ತು (5) ಶ್ರೀ ಎಸ್.ಎಸ್.ರೇವಡಿ, ಅಂದಿನ ಸ.ಇಂ. ಇವರುಗಳು ಪಂಚಾಯತ್ ರಾಜ್

ಇಂಜಿನಿಯರಿಂಗ್ ಉಪ ವಿಭಾಗ, ಹುನಗುಂದ ಇಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಅವಧಿಯಲ್ಲಿ ಎಸಗಿರುವ ಕರ್ತವ್ಯಲೋಪಕ್ಕೆ ಸಂವಾದಿಯಾಗಿ ಕರ್ನಾಟಕ ನಾಗರೀಕ ಸೇವಾ(ವ.ನಿ.ಮೇ) ನಿಯಮಗಳು 1957ರ ನಿಯಮ 8(iii)ರನ್ವಯ ಈ ಕೆಳಕಂಡಂತೆ ದಂಡನೆಯನ್ನು ವಿಧಿಸಿ ಆದೇಶಿಸಿದೆ.

| ಕ್ರ. ಸಂ | ಆಪಾದಿತರ ಹೆಸರು ಮತ್ತು ಪದನಾಮ | ವಿಧಿಸಲಾದ ದಂಡನೆ |
|---|---|---|
| 1. | ಶ್ರೀ ಮಹಾಂತಪ್ಪ ಕನ್ನೂರ<br>ಅಂದಿನ ಸಹಾಯಕ ಕಾರ್ಯಪಾಲಕ ಇಂಜಿನಿಯರ್ | ಕಾಲಿಕ ವೇತನ ಶ್ರೇಣಿಯಲ್ಲಿ ಎರಡು ಹಂತಗಳನ್ನು ಎರಡು ವರ್ಷಗಳ ಅವಧಿಗೆ ಅಥವಾ ಸೇವೆಯಿಂದ ನಿವೃತ್ತಿ ಹೊಂದುವವರೆಗೆ ಇವುಗಳಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ಕಡಿತಗೊಳಿಸುವುದು. |
| 2. | ಶ್ರೀ ಎಸ್.ಎನ್.ಗೌಡರ್,<br>ಅಂದಿನ ಸಹಾಯಕ ಕಾರ್ಯಪಾಲಕ ಇಂಜಿನಿಯರ್ | |
| 3. | ಶ್ರೀ ಸಿ.ಎಸ್.ಪೊಲೀಸ್ ಪಾಟೀಲ್,<br>ಅಂದಿನ ಸಹಾಯಕ ಇಂಜಿನಿಯರ್ | |
| 4. | ಶ್ರೀ ಎಸ್.ಎಸ್.ರೇವಡಿ,<br>ಅಂದಿನ ಸಹಾಯಕ ಇಂಜಿನಿಯರ್ | |
| 5. | ಶ್ರೀ ವಿಜಯಕುಮಾರ ಗೌಡರ್,<br>ಅಂದಿನ ಕಿರಿಯ ಇಂಜಿನಿಯರ್. | |

ಮೇಲ್ಕಂಡ ಆಪಾದಿತರುಗಳು ಮಂಜೂರಾದ ಅಂದಾಜಿನ ಪ್ರಕಾರ ನಿರ್ದಿಷ್ಟ ಪ್ರಮಾಣದ ಪೈಪುಗಳನ್ನು ಅಳವಡಿಸದೇ ಕಡಿಮೆ ವ್ಯಾಸದ ಪೈಪುಗಳನ್ನು ಅಳವಡಿಸಿದ್ದು, ಇದರಿಂದ ಸರ್ಕಾರಕ್ಕೆ ಉಂಟಾದ ಹೆಚ್ಚುವರಿ ವೆಚ್ಚವನ್ನು ಲೆಕ್ಕ ಹಾಕಿ ಸದರಿಯವರುಗಳಿಂದ ವಸೂಲು ಮಾಡಲು ಮುಖ್ಯ ಇಂಜಿನಿಯರ್, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ, ಬೆಂಗಳೂರು ಇವರಿಗೆ ಸೂಚಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

13/1/22

**(ಕೆ.ನದೀಮ್ ಅಹ್ಮದ್)**
ಸರ್ಕಾರದ ಅಧೀನ ಕಾರ್ಯದರ್ಶಿ (ಸೇವೆಗಳು-ಎ)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ

**ಇವರಿಗೆ:**

1. ಮಹಾಲೇಖಪಾಲರು, (ಅ ಮತ್ತು ಇ) ಕರ್ನಾಟಕ, ಬೆಂಗಳೂರು.
2. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಲೋಕೋಪಯೋಗಿ ಇಲಾಖೆ.
3. ಮುಖ್ಯ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ, ಬೆಂಗಳೂರು.
4. ಮುಖ್ಯ ಇಂಜಿನಿಯರ್, ಸಂಪರ್ಕ ಮತ್ತು ಕಟ್ಟಡಗಳು (ದಕ್ಷಿಣ), ಬೆಂಗಳೂರು.
5. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಬಾಗಲಕೋಟೆ
6. ಸಂಬಂಧಪಟ್ಟ ಆಪಾದಿತರುಗಳಿಗೆ- ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, **ಬಾಗಲಕೋಟೆ** ಇವರ ಮುಖಾಂತರ.
7. ಮಾನ್ಯ ಗ್ರಾ.ಅ.ಪಂ.ರಾಜ್ ಸಚಿವರ ಆಪ್ತ ಕಾರ್ಯದರ್ಶಿಯವರಿಗೆ.
8. ಗ್ರಾ.ಅ.ಪಂ.ರಾಜ್ ಇಲಾಖೆಯ ಪ್ರಧಾನ ಕಾರ್ಯದರ್ಶಿ/ಜಂಟಿ ಕಾರ್ಯದರ್ಶಿ (ಆಡಳಿತ-1) ಇವರ ಆಪ್ತ ಕಾರ್ಯದರ್ಶಿ/ಆಪ್ತ ಸಹಾಯಕರು.
9. ಸರ್ಕಾರದ ಅಧೀನ ಕಾರ್ಯದರ್ಶಿ,ಲೋಕೋಪಯೋಗಿ ಇಲಾಖೆ (ಸೇವೆಗಳು-ಎ ಮತ್ತು ಸಿ)
10. ಮೇಲ್ವಿಚಾರಕರು, ಗಣಕಯಂತ್ರ ವಿಭಾಗ, ಗ್ರಾ.ಅ.ಪಂ.ರಾಜ್ ಇಲಾಖೆ ಇವರಿಗೆ ವೆಬ್ ಸೈಟ್ ನಲ್ಲಿ ಪ್ರಕಟಿಸುವ ಸಲುವಾಗಿ.
11. ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.